**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

**ವಿಷಯ:** ಶ್ರೀಮತಿ.ಶೈಲಜಾ, ಉಪನ್ಯಾಸಕರು, ಸರ್ಕಾರಿ ಶ್ರೀಮತಿ ಎಲ್ ವಿ ಪಾಲಿಟೆಕ್ನಿಕ್, ಹಾಸನ ಇವರ ಅನಧಿಕೃತ ಗೈರುಹಾಜರಿ ಕುರಿತು ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಪ್ರಿನ್ಸಿಪಾಲರ ಜ್ಞಾಪನ ದಿನಾಂಕ: 18/05/2011, 08/06/2011, 15/03/2012, 01/08/2013 ಮತ್ತು 09/07/2014.
2. ಪ್ರಿನ್ಸಿಪಾಲರು ನಿರ್ದೇಶಕರಿಗೆ ಬರೆದ ಪತ್ರ ದಿನಾಂಕ: 22/4/2014, 05/03/2012, 09/07/2014 ಮತ್ತು 14/03/2015.
3. ಶ್ರೀಮತಿ. ಶೈಲಜಾ ಇವರ ಮನವಿ ಪತ್ರ ದಿನಾಂಕ: 19/02/2013 ಮತ್ತು 05/03/2013
4. ದೋಷಾರೋಪಣ ಪಟ್ಟಿ ಪತ್ರ ದಿನಾಂಕ: 18/06/2015.
5. ಇಲಾಖಾ ವಿಚಾರಣೆ ನಡೆಸಲು ಹೊರಡಿಸಿದ ಆದೇಶ ಸಂ: ಡಿಟಿಇ/58/ಇಎಸ್‌ಟಿ2(ಎ) 2015/ಡಿಇಕ್ಯೂ(1) 2015, ದಿನಾಂಕ:28/10/2016.
6. ವಿಚಾರಣಾಧಿಕಾರಿಗಳ ಅಂತಿಮ ವರದಿ ದಿನಾಂಕ: 16/06/2016.
7. 2ನೇ ಕಾರಣ ಕೇಳುವ ನೋಟಿಸ್ ದಿನಾಂಕ: 03/08/2016.

**ಪ್ರಸ್ತಾವನೆ;**

**ಶ್ರೀಮತಿ ಶೈಲಜಾ, ಉಪನ್ಯಾಸಕರು,** ಆದ ಇವರು ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ, ಇಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಉಪನ್ಯಾಸಕರಾಗಿ ದಿನಾಂಕ: 21/07/2010 ರಂದು ಸರ್ಕಾರಿ ಕೆಲಸಕ್ಕೆ ಕಾರ್ಯವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿರುತ್ತಾರೆ. ಸಂಸ್ಥೆಯಲ್ಲಿ ಕಾರ್ಯವರದಿ ಮಾಡಿಕೊಂಡು ದಿನಾಂಕ: 03/08/2010 ರಿಂದ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ 1057 ಕ್ಕಿಂತ ಹೆಚ್ಚು ದಿನಗಳು ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಈ ವಿಷಯದ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಹಲವಾರು ಬಾರಿ ಜ್ಞಾಪನದ ಮುಖೇನ ಅವರ ವರ್ತನೆಯಲ್ಲಿ ಬದಲಾವಣೆ ಮಾಡಿಕೊಳ್ಳಲು ಸೂಚಿಸಿದ್ದರೂ ಸಹ ತಿದ್ದುಪಡಿ ಮಾಡಿಕೊಳ್ಳದೇ ಪದೇ ಪದೇ ಅನಧಿಕೃತ ಗೈರುಹಾಜರಾಗುವುದನ್ನು ಅಭ್ಯಾಸ ಮಾಡಿಕೊಂಡಿರುತ್ತಾರೆ. ಈ ವರ್ತನೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪಾಠ ಪ್ರವಚನಗಳಿಗೆ ತೊಂದರೆಯಾಗಿ, ವಿದ್ಯಾರ್ಥಿಗಳು ಸದರಿಯವರ ವಿರುದ್ಧ ದೂರನ್ನು ನೀಡುತ್ತಲೇ ಬಂದಿರುತ್ತಾರೆ. ಸಂಬಂಧಪಟ್ಟ ವಿಭಾಗದ ವಿಭಾಗಾಧಿಕಾರಿಯವರೂ ಸಹ ಲಿಖಿತ ರೂಪದಲ್ಲಿ ಸದರಿಯವರ ಅನಧಿಕೃತ ಗೈರುಹಾಜರಿ ಬಗ್ಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿಯವರ ಅನಧಿಕೃತ ಗೈರುಹಾಜರಾತಿಯ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಜಾರಿ ಮಾಡಲಾದ ಹಲವಾರು ಜ್ಞಾಪನಗಳನ್ನು ಸ್ವೀಕರಿಸಿದ ಇವರು ಕೆಲವೇ ಕೆಲವು ಜ್ಞಾಪನಗಳಿಗೆ ಅನಿವಾರ್ಯ ಕಾರಣಗಳಿಂದ, ಕೌಟುಂಬಿಕ ಸಮಸ್ಯೆಗಳಿಂದ, ಆರ್ಥಿಕ ಸಂಕಷ್ಟದಿಂದ, ಆರೋಗ್ಯ ಸುಸ್ಥಿಯಲ್ಲಿಲ್ಲದ್ದರಿಂದ, ಅನಧಿಕೃತವಾಗಿ ಗೈರುಹಾಜರಾಗ ಬೇಕಾಯಿತೆಂದು ಪ್ರತ್ಯುತ್ತರ ನೀಡಿ, ಈ ಒಂದು ಬಾರಿಗೆ ನನ್ನ ತಪ್ಪನ್ನು ಮನ್ನಿಸಿ, ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಿ ಎಂದು ಮತ್ತು ಇನ್ನು ಮುಂದೆ ಈ ರೀತಿ ಗೈರುಹಾಜರಾಗದಂತೆ ಹಾಗೂ ಇಂತಹ ತಪ್ಪು ಮಾಡುವುದಿಲ್ಲ ಎಂಬಿತ್ಯಾದಿ ವಿವರಣೆಗಳೊಂದಿಗೆ ಮುಚ್ಚಳಿಕೆ ಪತ್ರಗಳನ್ನು ಆಗಾಗ ಬರೆದುಕೊಟ್ಟಿರುತ್ತಾರೆ. ಆದರೂ ಸಹ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆಯಾಗದೆ ಮೇಲಿಂದ ಮೇಲೆ ಗೈರುಹಾಜರಾಗುವುದನ್ನು ರೂಢಿಸಿಕೊಂಡಿರುತ್ತಾರೆ. ಇವರು ಒಬ್ಬ ಜವಾಬ್ದಾರಿಯುತ

ನೌಕರರಾಗಿ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ, ಮೇಲಾಧಿಕಾರಿಗಳ ಆದೇಶವನ್ನು ತಿರಸ್ಕರಿಸಿ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯನ್ನುಂಟು ಮಾಡಿ ದೀರ್ಘಾವಧಿ ಅನಧಿಕೃತ ಗೈರುಹಾಜರಾಗಿರುತ್ತಾರೆ.

ಅಲ್ಲದೆ, ಸದರಿಯವರು ಬೋಧಿಸುವ ಪಾಠ ಪ್ರವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈಗಿನ ವಿಷಯಗಳಿಗನುಗುಣವಾಗಿ ಯಾವುದೇ ರೀತಿಯಲ್ಲಿ ಅಪ್‌ಡೇಟ್ ಆಗಿರುವುದಿಲ್ಲದಿರುವುದು ಕಂಡುಬಂದಿದ್ದು ಅದಕ್ಕೆ ಪುಷ್ಟಿ ನೀಡುವಂತೆ ತಮಗೆ ಪಾಠ ಮಾಡಲು ಬರುವುದಿಲ್ಲವೆಂದು, ಯಾವುದಾದರೂ ಕ್ಲರಿಕಲ್ ಹುದ್ದೆಯನ್ನು ನೀಡಬೇಕೆಂದು ಕೇಳಿರುತ್ತಾರೆ. ಇದರಿಂದ ಇವರು ಒಬ್ಬ ಜವಾಬ್ದಾರಿಯುತ ಉಪನ್ಯಾಸಕರ ಹುದ್ದೆಗೆ ಅನರ್ಹರೆಂದು ಕಂಡುಬರುತ್ತದೆ. ಅಲ್ಲದೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಇಷ್ಟು ದೀರ್ಘಾವಧಿ ಅನಧಿಕೃತ ಗೈರುಹಾಜರಾಗಿರುವುದು ನಿಯಮಾವಳಿಗೆ ವಿರುದ್ಧವಾಗಿರುತ್ತದೆ. ಹಾಗೂ ಖಾಯಂ ಪೂರ್ವಾವಧಿ ಸಹ ಘೋಷಣೆಯಾಗಿರುವುದಿಲ್ಲ. ಇವರ ಈ ಅನಧಿಕೃತ ಗೈರುಹಾಜರಿ ಸಂಬಂಧವಾಗಿ ದಿನಾಂಕ: 18/06/2015ರಂದು ದೋಷಾರೋಪಣ ಪಟ್ಟಿ ಜಾರಿಮಾಡಿ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿತ್ತು. ಸದರಿ ನೋಟೀಸ್‌ನ್ನು ಸ್ವೀಕರಿಸಿಕೊಂಡು, ಯಾವುದೇ ಲಿಖಿತ ಸಮಜಾಯಿಷಿಯನ್ನು ಸಲ್ಲಿಸದೆ ಕರ್ತವ್ಯ ನಿರ್ಲಕ್ಷ್ಯತೆ ತೋರಿ ಒಬ್ಬ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುತ್ತಾರೆ. ಮೇಲಧಿಕಾರಿಗಳ ಆದೇಶವನ್ನು ತಿರಸ್ಕರಿಸಿ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಹಾಗೂ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯನ್ನುಂಟು ಮಾಡಿ ರ್ಘಾವಧಿ ಅನಧಿಕೃತ ಗೈರುಹಾಜರಾಗಿ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆ ತೋರುವುದರಲ್ಲಿ ವಿಫಲರಾಗಿ ಕರ್ನಾಟಕ ನಾಗರೀಕ ಸೇವಾ ನಡತೆ(ವರ್ತನೆ) ನಿಯಮಗಳು 1966ರ ನಿಯಮ 3(1)ರ ಉಪನಿಯಮ **(i) (ii)** ಮತ್ತು **(iii)** ನ್ನು ಉಲ್ಲಂಘಿಸಿರುವ ಆರೋಪದ ಮೇರೆಗೆ ಶಿಸ್ತು ಪ್ರಾಧಿಕಾರವು ನಿಯಮಾನುಸಾರ ಪೂರ್ಣಾವಧಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಶ್ರೀ.ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ದಿನಾಂಕ: 28/10/2015ರಲ್ಲಿ ನೇಮಿಸಲಾಯಿತು. ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ದಿನಾಂಕ:16/6/2016ರಂದು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಿದಾಗ **ಶ್ರೀಮತಿ ಶೈಲಜಾ, ಉಪನ್ಯಾಸಕರು** ಇವರ ವಿರುದ್ಧ ಹೊರಿಸಲಾದ ಆರೋಪಗಳು ಸಾಬೀತಾಗಿದೆ ಎಂದು ಅಂತಿಮ ವರದಿಯಲ್ಲಿ ತಿಳಿಸಿರುತ್ತಾರೆ. ಇಲಾಖಾ ವಿಚಾರಣೆಯ ಅಂತಿಮ ವರದಿಯನ್ನು ಲಗತ್ತಿಸಿ 2ನೇ ಕಾರಣ ಕೇಳುವ ನೋಟಿಸ್ ಮೂಲಕ ನಿಯಾಮಾನುಸಾರ 30 ದಿವಸಗಳ ಕಾಲಾವಕಾಶ ನೀಡಿ ಆರೋಪಿತರ ಲಿಖಿತ ರಕ್ಷಣಾತ್ಮಕ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿತ್ತು.

ಶ್ರೀಮತಿ.ಶೈಲಜಾ, ಉಪನ್ಯಾಸಕರು, ನೋಟೀಸ್‌ನ್ನು ಸ್ವೀಕರಿಸಿಕೊಂಡು ಲಿಖಿತ ಸಮಜಾಯಿಷಿಯನ್ನು ದಿನಾಂಕ:12/09/2016ರಂದು ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಆರೋಪಿತರು ಮಾನ್ಯ ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿಯಲ್ಲಿ ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿರುವ ವರದಿಯು ನ್ಯಾಯಯುತವಾಗಿಲ್ಲವೆಂದೂ, ಕೆಸಿಎಸ್(ಸಿಸಿಎ) ನಿಯಮಗಳು 1957ರ ನಿಯಮ 11(23)ರಲ್ಲಿ ಹೇಳಿರುವಂತೆ ಸಾಕ್ಷಿಗಳ ಮೌಲ್ಯಮಾಪನೆ ಮಾಡಿಲ್ಲವೆಂದೂ, ತಾನು ಸಕಾಲದಲ್ಲಿ ವೈದ್ಯಕೀಯ ದೃಢೀಕರಣವನ್ನು ಕೊಟ್ಟಿದ್ದರೂ ಅವುಗಳನ್ನು ಮಾನ್ಯ ವಿಚಾರಣಾಧಿಕಾರಿಗಳು ಪರಿಗಣಿಸಿಲ್ಲವೆಂದೂ, ಆದ್ದರಿಂದ, ಆರೋಪ ರುಜುವಾತಾಗಿಲ್ಲವೆಂದು ತೀರ್ಮಾನಿಸಿ ಆರೋಪದಿಂದ ಮುಕ್ತ ಮಾಡಬೇಕೆಂದು ಪ್ರಾರ್ಥಿಸುತ್ತೇನೆಂದೂ, ತನ್ನ ಹಾಗೂ ತನ್ನ ಪತಿ ನಡುವೆ ವಿವಾಹ ವಿಚ್ಛೇದನವಾಗಿರುವುದರಿಂದ ತಾನು ಮಾನಸಿಕವಾಗಿ ನೊಂದು ಜೀವನದಲ್ಲಿ ಹತಾಶೆಗೊಂಡಿದ್ದೇನೆಂದೂ ಹಾಗೂ ಇದರಿಂದಾಗಿ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಈ ಕಾರಣದಿಂದ ತಾನು ನಿರ್ದೇಶಕರಿಗೆ ಒಂದು ಮನವಿಯನ್ನು ಸಲ್ಲಿಸಿದ್ದು, ಅದರಲ್ಲಿ ವಿವರವಾಗಿ ತನಗಾಗಿರುವ ತೊಂದರೆಯನ್ನು ವಿವರಿಸಿ ಹೇಳಿದ್ದೇನೆಂದೂ ಹಾಗೂ ಅದರೊಂದಿಗೆ ವೈದ್ಯಕೀಯ ದೃಢೀಕರಣವನ್ನು ಲಗತ್ತಿಸಿದ್ದು, ಅದರಂತೆ, ತನ್ನನ್ನು ಮೇಲಿನ ಆರೋಪದಿಂದ ಮುಕ್ತಮಾಡಿ, ನ್ಯಾಯಾಭಿವೃದ್ಧಿ ದೃಷ್ಟಿಯಿಂದ ಹಾಗೂ ಮಾನವೀಯತೆ ದೃಷ್ಟಿಯಿಂದ ಕರುಣೆ ತೋರಬೇಕಾಗಿ ಪ್ರಾರ್ಥಿಸುತ್ತೇನೆ ಎಂದು ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಸದರಿಯವರ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ, ಶಿಸ್ತು ಪ್ರಾಧಿಕಾರವು ಈ ಕೆಳಗಿನಂತೆ ಆದೇಶಿಸಿದೆ.

**ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ/58/ಇಎಸ್‌ಟಿ 2(ಎ)/2014/ಡಿಇಕ್ಯೂ(1) 2015**
**ದಿನಾಂಕ: 2ನೇ ನವೆಂಬರ್ 2016**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ **ಶ್ರೀಮತಿ ಶೈಲಜಾ, ಉಪನ್ಯಾಸಕರು,** ಕಂಪ್ಯೂಟರ್ ಸೈನ್ಸ್ ವಿಭಾಗ, ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ ಇವರ ಮೇಲಿನ ಆರೋಪವು ಇಲಾಖಾ ವಿಚಾರಣೆಯಿಂದ ಸಾಬೀತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 8(iii) ರನ್ವಯ ಕೆಳಕಂಡ ದಂಡನೆಯನ್ನು ನಿರ್ಣಯಿಸಿ, "ಒಂದು ವಾರ್ಷಿಕ ವೇತನ ಬಡ್ತಿಯನ್ನು ಅಸಂಚಿತ ಪರಿಣಾಮರಹಿತವಾಗಿ ತಡೆಹಿಡಿಯಲು ಆದೇಶಿಸಿದೆ"

**ನಿರ್ದೇಶಕರು**
**ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ,**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

ಇವರಿಗೆ,

1) **ಶ್ರೀಮತಿ ಶೈಲಜಾ, ಉಪನ್ಯಾಸಕರು,** ಕಂಪ್ಯೂಟರ್ ಸೈನ್ಸ್ ವಿಭಾಗ, ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ (ಪ್ರಿನ್ಸಿಪಾಲರ ಮುಖಾಂತರ).
2) ಪ್ರಿನ್ಸಿಪಾಲರು, ಶ್ರೀಮತಿ.ಎಲ್.ವಿ.ಸರ್ಕಾರಿ ಪಾಲಿಟೆಕ್ನಿಕ್, ಹಾಸನ (ಸದರಿ ಆದೇಶವನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಅವರ ಸ್ವ ವಿಳಾಸಕ್ಕೆ ಜಾರಿ ಮಾಡಿ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸುವ ಸಲುವಾಗಿ ಮತ್ತು ಸದರಿಯವರನ್ನು ಕೂಡಲೇ ಕಾರ್ಯವರದಿ ಮಾಡಿಸಿಕೊಂಡು ಮಾಹಿತಿಯನ್ನು ಕಳುಹಿಸುವುದು)
3) ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3) ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು.
4) ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6) ನಿರ್ದೇಶನಾಲಯದ ಆಪ್ತ ಶಾಖೆಗೆ.
7) ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
8) ಇಎಸ್‌ಟಿ(2)ಎ, ಇಎಸ್‌ಟಿ(7), ಇಎಸ್‌ಟಿ8(ಬಿ) ಮತ್ತು ಇಎಸ್‌ಟಿ(9) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

Nadavali